## ಟೆನ್ಶನ್ ಮರೀರಿ, ಪರೀಕ್ಷೆ ಬರೀರಿ

ಜ. 23ರ ಸಂಚಿಕೆಯಲ್ಲಿ ಗುರುರಾಜ್ ದಾವಣಗೆರೆ ಬರೆದಿರುವ 'ಟೆನ್ಶನ್ ಮರೀರಿ, ಪರೀಕ್ಷೆ ಬರೀರಿ' ಲೇಖನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತ. 10 ಪುಟಗಳಲ್ಲಿ ವಿದ್ಯಾರ್ಥಿಗಳು ಹೇಗೆ ಪರೀಕ್ಷೆಗೆ ಸಿದ್ಧಗೊಳ್ಳಬೇಕು ಎಂಬುದರ ಕುರಿತು ಉತ್ತಮ ಮಾಹಿತಿ ನೀಡಿರುತ್ತೀರಿ. ಲೇಖನ ಓದಿದ ನಾನು ಸಂಚಿಕೆಯನ್ನು ಅಕ್ಕಪಕ್ಕದ ಮನೆಯಲ್ಲಿನ ವಿದ್ಯಾರ್ಥಿಗಳಿಗೂ ಓದಿಸಿದೆ.

—ಎಂ.ಎಸ್. ಇಂದಿರಾ, ಬೆಂಗಳೂರು

'ಟೆನ್ಶನ್ ಮರೀರಿ, ಪರೀಕ್ಷೆ ಬರೀರಿ' ಉಪಯುಕ್ತ ಲೇಖನ. ಇದು ತಮ್ಮ ಪತ್ರಿಕೆ ಸಮಾಜಕ್ಕೆ ನೀಡಿದ ಅಮೂಲ್ಯ ಕೊಡುಗೆ. ಇತ್ತೀಚಿನ ವರ್ಷಗಳಲ್ಲಿ ಪರೀಕ್ಷೆಗಳು, ಸ್ಪರ್ಧಾತ್ಮಕ ಪರೀಕ್ಷೆಗಳಾಗಿ ಪರಿವರ್ತನೆಗೊಂಡಿವೆ. ಜ್ಞಾನಾರ್ಜನೆಗಿಂತ ಅಂಕಗಳಿಕೆ ಮುಖ್ಯವಾಗಿವೆ.

—ಪ್ರಕಾಶ್ ಕೆ., ಚಿಕ್ಕಮಗಳೂರು

## ಕಿತ್ತಯನ ಕನಸು

ಜ.09ರ ಸಂಚಿಕೆಯಲ್ಲಿ ಪ್ರಕಟವಾದ ಚಿತ್ರಾ ರಾಮಚಂದ್ರನ್ ಬರೆದ 'ಕಿತ್ತಯನ ಕನಸು' ಕಥೆ ಮನಮುಟ್ಟುವ ಹಾಗಿತ್ತು. ಕಿತ್ತಯನ ಕನಸು ನನಸಾಗಿದ್ದರೆ ಚೆನ್ನಾಗಿರುತ್ತಿತ್ತು.

—ಬಿದರಹಳ್ಳಿ ಚೆನ್ನವೀರಪ್ಪ, ಹಿರೇಹಡಗಲಿ

## ಜಾತ್ರೆಗೆ ಹೋಗೋಣ ಬನ್ನಿ



ಜ. 16ರ ಸಂಚಿಕೆಯಲ್ಲಿ ಪ್ರಕಟವಾದ ಕೆ. ನರಸಿಂಹಮೂರ್ತಿ ಅವರ 'ಜಾತ್ರೆಗೆ ಹೋಗೋಣ ಬನ್ನಿ' ಲೇಖನ ತುಂಬ ಚೆನ್ನಾಗಿತ್ತು. ನಾಡಿನ ಪ್ರಸಿದ್ಧ ಜಾತ್ರೆಗಳ ಚಿತ್ರ ಲೇಖನ ಓದಿ ನಾವೇ ಜಾತ್ರೆಗಳಲ್ಲಿ ಭಾಗವಹಿಸಿದ ಅನುಭವ ಆಯಿತು. ಜಾತ್ರೆ ಎಂದೊಡನೆ ನಮ್ಮ ಬಾಲ್ಯದ ದಿನಗಳಲ್ಲಿ ನಾವು ಅನುಭವಿಸಿದ ಜಾತ್ರೆಯ ಅನುಭವ ಕಣ್ಮುಂದೆ ಹಾದುಹೋದವು.

—ಕಾಳಿಹುಂಡಿ ಶಿವಕುಮಾರ್, ಮೈಸೂರು
ಎಸ್.ರಮೇಶಬಾಬು, ಚಿತ್ರದುರ್ಗ

ಜ. 16ರ ಸಂಚಿಕೆಯ 'ಊರು ತೇರು' ಲೇಖನ ನಮ್ಮ ಸಂಸ್ಕೃತಿ ನಮ್ಮ ಸಂಪ್ರದಾಯ ಪದ್ಧತಿಗಳನ್ನು ಪರಿಚಯಿಸುವ ಹಾಗಿದೆ. ಉತ್ತರಕರ್ನಾಟಕದ ಕುಂಭಮೇಳ ಎಂದೇ ಪ್ರಸಿದ್ಧಿ ಪಡೆದ ಕೊಪ್ಪಳದ ಗವಿಸಿದ್ದೇಶ್ವರ ಜಾತ್ರೆಯ ಪರಿಚಯವೂ ಇರಬೇಕಾಗಿತ್ತು. 'ವಿಷಗಾಳಿ ತೀಳಿಗೊಳಿಸುವ ಸಸ್ಯ'ಗಳು ಎಂಬ ರೂಪಾ. ಕೆ. ಎಂ. ಲೇಖನ ಉಪಯುಕ್ತ ಮಾಹಿತಿ ನೀಡಿತು. ಸಸ್ಯಗಳ ಬಗ್ಗೆ ಅರಿವಿನ ಲೇಖನವಾಗಿತ್ತು.

—ವಿನಾಯಕ ಆರ್. ಜಾಲಹಳ್ಳಿ , ರಾಯಚೂರು

## ಉಚ್ಚಾರಣೆಯ ಹೆಸರಿನಲ್ಲಿ ದೌರ್ಜನ್ಯ

ಜ. 23ರ ಸಂಚಿಕೆಯ 'ನಿಮ್ಮೊಡನೆ'ಯಲ್ಲಿ ರಘುನಾಥ ಚ. ಹ. ಬರೆದಿರುವ 'ಭಾಷೆಯ ಆರ್ದ್ರತೆ' ಲೇಖನ ಸಕಾಲಿಕವಾಗಿತ್ತು. ಕೆಲವರ ದೈಹಿಕ ಸ್ಥಿತಿ ಮತ್ತು ಸನ್ನಿವೇಶಗಳು ಸ್ಪಷ್ಟ ಉಚ್ಚಾರಣೆಗೆ ಅಡಚಣೆ ಮಾಡಬಹುದು. ಅದನ್ನೇ ವೈಭವೀಕರಿಸಿ ಅವಮಾನಿಸುವ ಕ್ರಮ ಖಂಡನೀಯ. ರಾಜಕಾರಣಿಗಳು ಆದಿಯಾಗಿ ಶಿಕ್ಷಣಕ್ಷೇತ್ರದ ಮೇಧಾವಿಗಳೂ ಪುಂಖಾನುಪುಂಖವಾಗಿ ಸಾವಿರಾರು ಜನಗಳೆದುರು ತಪ್ಪುತಪ್ಪಾಗಿ ಉಚ್ಚರಿಸುತ್ತ ಭಾಷೆಯ ಕೊಲೆ ಮಾಡುತ್ತಿದ್ದಾರೆ. ಇಂತಹವರನ್ನು ಪ್ರಶ್ನಿಸುವ ಧೈರ್ಯ ಯಾರಲ್ಲೂ ಇಲ್ಲ. ಬದಲಿಗೆ ಬಡವರಿಗೆ, ದುರ್ಬಲರಿಗೆ ಮಾತ್ರ ಉಚ್ಚರಣೆಯ ಹೆಸರಿನಲ್ಲಿ ಶಿಕ್ಷಿಸುವುದಕ್ಕೆ ಸೀಮಿತವಾದಂತಾಗಿದೆ ಈಗಿನ ವ್ಯವಸ್ಥೆ.

—ಅರವಿಂದ ಜಿ. ಜೋಷಿ, ಮೈಸೂರು

'ನಿಮ್ಮೊಡನೆ'ಯಲ್ಲಿ ಭಾಷಾ ಪ್ರಯೋಗದ ವಿಚಾರದಲ್ಲಿ ರಘುನಾಥ್ ಚ.ಹ. ಸಮರ್ಥ ಲೇಖನ ಬರೆದಿದ್ದಾರೆ. ಪ್ರಬಲರು ಯಜಮಾನಿಕೆಯ ಗತ್ತಿನಲ್ಲಿ ಭಾಷೆಯನ್ನು ಆಯುಧವಾಗಿ ಬಳಸಿಕೊಂಡು ಧಮನಿತರ ಹಕ್ಕನ್ನು ಹತ್ತಿಕ್ಕುವ ಸಂದರ್ಭದಲ್ಲಿ ನಾವಿದ್ದೇವೆ ಎಂದು ಹೇಳಿರುವುದು ಸತ್ಯವೇ ಆಗಿದೆ.

—ರುದ್ರಮೂರ್ತಿ ಎಂ. ಜೆ., ಚಿತ್ರದುರ್ಗ



## ಚಂದದ ಕಥೆ

ಜ. 23ರ ಸಂಚಿಕೆಯ ಸ. ರಘುನಾಥ ಅವರ ಕಥೆ 'ಡಿಲೀಟ್' ಚೆನ್ನಾಗಿದೆ. ಕಾವ್ಯಭಾವದ ಕಥೆ ಕುತೂಹಲದಿಂದ ಕಡೆಯತನಕ ಓದಿಸಿಕೊಂಡು ಹೋಯಿತು. ಕಥೆಗೆ ಪೂರಕವಾದ ಚಿತ್ರ ಮೆದುಳಿಗೆ ಕಸರತ್ತು ಕೊಡುವಂಥದ್ದು. ಒಣಮರ ಜೀವ ಸ್ವರ ಓದಿದಾಗ ಬಸವಣ್ಣನವರ 'ನೀನೊಲಿದೊಡೆ ಕೊರಡು ಕೊನರುವುದಯ್ಯಾ' ಸಾಲು ನೆನಪಾಯಿತು. ಗುರುರಾಜ್ ದಾವಣಗೆರೆ ಅವರ ಲೇಖನ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕ.

—ಸುಶೀಲಾ ಸೋಮಶೇಖರ್, ಹಾಸನ

## ಕಂಗೆಡಿಸಿದ ಕಾಡ್ಗಿಚ್ಚು

ಜ.23ರ ಸಂಚಿಕೆಯಲ್ಲಿ ಸಿಡ್ನಿ ಶ್ರೀನಿವಾಸ್ ಬರೆದಿರುವ 'ಕಾಂಗರೂ ನಾಡನ್ನು ಕಂಗೆಡಿಸಿದ ಕಾಡ್ಗಿಚ್ಚು' ಲೇಖನ ಓದಿದೆ. ಆಸ್ಟ್ರೇಲಿಯಾದಲ್ಲಿನ ಅಗ್ನಿಯ ರುದ್ರ ನರ್ತನದಿಂದ ಮಿಲಿಯನ್‌ಗಟ್ಟಲೆ ಮೂಕ ಪ್ರಾಣಿಗಳು ಅಗ್ನಿಗಾಹುತಿಯಾಗಿವೆ. ಈ ವೈಪರೀತ್ಯದಿಂದ ಕುಡಿಯುವ ನೀರಿಗೆ ತತ್ವಾರ ಉಂಟಾಗಿ, ಅತ್ಯಧಿಕ ಸಂಖ್ಯೆಯಲ್ಲಿ ಒಂಟೆಗಳ ಮಾರಣಹೋಮ ಮಾಡಲಾಗುತ್ತಿರುವುದು ಪೈಶಾಚಿಕ. ಅಳಿದುಳಿದಿರುವ ನದಿ, ಕೆರೆಗಳ ನೀರನ್ನು ಒಂಟೆಗಳು ಆಪೋಷಣ ಮಾಡಿದಲ್ಲಿ ಮಾನವ ಅಂತ್ಯ ಖಚಿತವಂತೆ. ಇದೆಂತಹ ವಿಪರ್ಯಾಸ! ಪ್ರಕೃತಿಯನ್ನು ಉಳಿಸದಿದ್ದಲ್ಲಿ ಈ ರೀತಿಯ ಅವಘಡಗಳನ್ನು ಎದುರಿಸಬೇಕಾದೀತು.

—ಮಧುರಾ ಸುಬ್ರಹ್ಮಣ್ಯ, ಬೆಂಗಳೂರು

## ವಾಸ್ತವದಿಂದ ದೂರ

ಜ.30ರ ಸಂಚಿಕೆಯಲ್ಲಿ ಸೌಮ್ಯಾಲಕ್ಷ್ಮೀ ಭಟ್ ಬರೆದಿರುವ 'ಮಹಿಳಾಪರ ಕಾನೂನು' ಲೇಖನ ಯಾವುದೇ ಅರಿವು ಮೂಡಿಸುವುದಿಲ್ಲ. ಈ ಲೇಖನ ಇಂದಿನ ಮಹಿಳೆಯರ ಬದುಕಿನ ವಾಸ್ತವಕ್ಕಿಂತ ತುಂಬ ದೂರದಲ್ಲಿದೆ. ಲೇಖಕಿ ಬಹುಶಃ ಒಂದು ವರ್ಗದ ಜನರ ಬಗ್ಗೆ ಮಾತ್ರ ಕಾಳಜಿ ಹೊಂದಿರಬಹುದು. ಕಾನೂನಿನಲ್ಲಿಯೇ ಸಮಾನತೆ ಎಂಬುದಿಲ್ಲ. ವಿಷಯದ ಒಂದೇ ಮುಖವನ್ನು ಪರಿಚಯಿಸಿ ಹೆದರಿಸುವುದು ಅಪಾಯಕಾರಿ.

—ಶಿವರಾಜ್ ಪಾಟೀಲ್

## ಅತ್ಯಗತ್ಯ ಅರಿವು

'ಮಹಿಳಾಪರ ಕಾನೂನು' ಲೇಖನ ಅತ್ಯಗತ್ಯ ಅರಿವನ್ನು ಮೂಡಿಸುವ ಹಾಗಿದೆ. ಪುರುಷ ಅಹಂಕಾರದಿಂದ ಹೆಣ್ಣನ್ನು ತನ್ನ ಅಡಿಯಾಳು ಎಂದು ಭಾವಿಸುವವರು, ಉಡುಗೆ ತೊಡುಗೆಗಳನ್ನೇ ಗಮನದಲ್ಲಿಟ್ಟುಕೊಂಡು ಅವಳು ಇಂದು ಶೋಷಣೆಗೊಳಗಾಗುತ್ತಿಲ್ಲ ಎಂದು ಘೋಷಣೆ ಮಾಡುವವರು, ಸಬಲೀಕರಣದ ಅಗತ್ಯ ಬೆಂಬಲವನ್ನು ಅಸಮಾನತೆ ಎಂದು ಬೊಬ್ಬೆ ಹೊಡೆಯುವವರೆಲ್ಲರೂ ಈ ಲೇಖನವನ್ನು ಮೂರು ಮೂರು ಬಾರಿ ಓದಿ ತಮ್ಮ ಆಲೋಚನಾಕ್ರಮದ ಕುರಿತು ನಾಚಿಕೆಪಟ್ಟುಕೊಳ್ಳಬೇಕು.

—ಗಂಗಾಧರಸ್ವಾಮಿ ಎಸ್. ಕಾಸರಗೋಡು

### ತಿದ್ದುಪಡಿ

ಸೌಮ್ಯಲಕ್ಷ್ಮೀ ಭಟ್ ಅವರ 'ಮಹಿಳಾ ಕಾನೂನು' (ಜ. 30) ಬರಹದಲ್ಲಿ, '2018ರ ಸಮೀಕ್ಷೆಯ ಪ್ರಕಾರ ಕೇವಲ 78% ಮಹಿಳೆಯರು ಮಾತ್ರ ಉದ್ಯೋಗಗಳಲ್ಲಿ ಇದ್ದರು' ಎಂದು ಕಣ್ತಪ್ಪಿನಿಂದ ಪ್ರಕಟವಾಗಿದೆ. ಅದು '7–8% ಮಹಿಳೆಯರು ಮಾತ್ರ ಉದ್ಯೋಗಗಳಲ್ಲಿ ಇದ್ದರು' ಎಂದಾಗಬೇಕು. —ಸಂ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in